ರಾಜ್ಯ ಚುನಾವಣಾ ಆಯೋಗ
ಕರ್ನಾಟಕ

ಅಭ್ಯರ್ಥಿಗಳ

# ಮಾರ್ಗದರ್ಶನಕ್ಕಾಗಿ ಸದಾಚಾರ ಸಂಹಿತೆ

ಬೆಂಗಳೂರು
2015

# ರಾಜ್ಯ ಚುನಾವಣಾ ಆಯೋಗ
# ಕರ್ನಾಟಕ
# ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಸದಾಚಾರ ಸಂಹಿತೆ

ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಸಂಬಂಧ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಮಾದರಿ ಸದಾಚಾರ ಸಂಹಿತೆ.

ಭಾರತ ಸಂವಿಧಾನ ಅನುಚ್ಛೇದ 243K ಮತ್ತು 243ZAಗಳ ಅಡಿಯಲ್ಲಿ ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ಸ್ ಅಧಿನಿಯಮ 1976ರ ಪ್ರಕರಣ 55 ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ ಅಧಿನಿಯಮ 1964ರ ಪ್ರಕರಣ 38ರಲ್ಲಿ ಆಯೋಗಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ರಾಜ್ಯದಲ್ಲಿ ನಡೆಸುವ ಎಲ್ಲಾ ಗ್ರಾಮ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ, ಜಿಲ್ಲಾ ಪಂಚಾಯತಿಗಳ, ಪಟ್ಟಣ ಪಂಚಾಯತಿಗಳ, ಪುರಸಭೆಗಳ, ನಗರಸಭೆಗಳ ಹಾಗೂ ನಗರಪಾಲಿಕೆಗಳ (ಇನ್ನು ಮುಂದೆ ಸ್ಥಳೀಯ ಸಂಸ್ಥೆಗಳೆಂದು ಹೇಳಲ್ಪಡುವ) ಚುನಾವಣೆಗಳು ಮುಕ್ತ, ನ್ಯಾಯಯುತ ಮತ್ತು ಶಾಂತಿಯುತವಾಗಿ ನಡೆಯುವಂತೆ ಮಾಡಲು ಈ ಕೆಳಕಂಡಂತೆ ಪಾಲನೆ ಮಾಡಬೇಕಾದ ಸದಾಚಾರ ಸಂಹಿತೆಯನ್ನು ಹೊರಡಿಸಿದೆ.

## ಸದಾಚಾರ ಸಂಹಿತೆ

1. a) ಈ ಸಂಹಿತೆಯು ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಸಂಬಂಧ ಸದಾಚಾರ ಸಂಹಿತೆಯೆಂದು ಕರೆಯಲ್ಪಡುವುದು.

   b) ಈ ಸದಾಚಾರ ಸಂಹಿತೆಯ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ ಎಲ್ಲಾ ರಾಜಕೀಯ

ಪಕ್ಷಗಳಿಗೆ, ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಗೆ, ಸಚಿವರುಗಳಿಗೆ, ಸರ್ಕಾರಿ ನೌಕರರು, ಸ್ಥಳೀಯ ಸಂಸ್ಥೆಗಳ ನೌಕರರು ಮತ್ತು ಸಾರ್ವಜನಿಕ ಸೇವೆಯಲ್ಲಿರುವ ಇತರೆ ನೌಕರರುಗಳಿಗೆ ಅನ್ವಯಿಸುತ್ತದೆ.

2. ಸದಾಚಾರ ಸಂಹಿತೆಯು ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸುವ ದಿನಾಂಕ ಅಥವಾ ರಾಜ್ಯ ಚುನಾವಣಾ ಆಯೋಗ ನಿಗಿದಿಪಡಿಸುವ ದಿನಾಂಕದಿಂದ ಚುನಾವಣೆಯ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಅಥವಾ ರಾಜ್ಯ ಚುನಾವಣಾ ಆಯೋಗವು ಪ್ರಕಟಿಸಿದಂತೆ ಜಾರಿಯಲ್ಲಿರುತ್ತದೆ.

3. ಈ ಸಂಹಿತೆಯಲ್ಲಿ ಉಪಯೋಗಿಸುವ ಪದಗಳು ಮತ್ತು ಶಬ್ದಪ್ರಯೋಗಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993, ಕರ್ನಾಟಕ ಮುನಿಸಿಪಾಲಿಟೀಸ್ ಅಧಿನಿಯಮ 1964, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ಸ್ ಅಧಿನಿಯಮ 1976 ಮತ್ತು ಅವುಗಳ ಅಡಿಯಲ್ಲಿ ರಚಿತವಾದ ನಿಯಮಗಳಲ್ಲಿ ಹೊಂದಿರುವ ಅರ್ಥವನ್ನೇ ಹೊಂದಿರುತ್ತದೆ.

4. **ಸಾಮಾನ್ಯ ಸದಾಚಾರ**

i) ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ವಿವಿಧ ಜಾತಿ ಅಥವಾ ಸಮುದಾಯಗಳ ಮಧ್ಯೆ ಅಥವಾ ಮತೀಯ ಅಥವಾ ಭಾಷಾ ಸಮೂಹಗಳ ಮಧ್ಯ ಇರುವ ವೈಮನಸ್ಯತ್ವವನ್ನು (ಭಿನ್ನಾಭಿಪ್ರಾಯ) ಕೆರಳಿಸುವ ಅಥವಾ ಪರಸ್ಪರ ದ್ವೇಷ ಹುಟ್ಟಿಸುವ ಅಥವಾ ಉದ್ವೇಗಕ್ಕೆ ಕಾರಣವಾಗುವಂತಹ ಯಾವುದೇ ಚಟುವಟಿಕೆಗಳಲ್ಲಿ ತೊಡಗಬಾರದು.

ii) ಇತರೆ ರಾಜಕೀಯ ಪಕ್ಷವನ್ನು ಟೀಕಿಸುವಾಗ ಆ ಪಕ್ಷಗಳ ಕಾರ್ಯನೀತಿ, ಕಾರ್ಯಕ್ರಮ, ಹಿಂದಿನ ಕಾರ್ಯ ನೀತಿಗಳಿಗೆ ಮಾತ್ರ ಟೀಕೆಗಳು ಸೀಮಿತವಾಗಿರತಕ್ಕದ್ದು. ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಇತರೆ ಪಕ್ಷದ ನಾಯಕರ ಅಥವಾ ಕಾರ್ಯಕರ್ತರ ಸಾರ್ವಜನಿಕ ಚಟುವಟಿಕೆಗಳಿಗೆ ಸಂಬಂಧಪಟ್ಟಿರದ ಅವರ ಖಾಸಗಿ ಜೀವನದ ಯಾವುದೇ ಅಂಶಗಳನ್ನು ಕುರಿತು (ಪಕ್ಷವಾಗಲಿ, ಅಭ್ಯರ್ಥಿಗಳಾಗಲಿ) ಟೀಕೆ ಮಾಡತಕ್ಕದ್ದಲ್ಲ. ರುಜುವಾತಾಗದ ಆಪಾದನೆಗಳ ಆಧಾರದ ಮೇಲೆ ಅಥವಾ ವಿರೂಪಗೊಳಿಸುವ ಸಂಗತಿಗಳ ಆಧಾರದ ಮೇಲೆ ಇತರೆ ಪಕ್ಷಗಳನ್ನು ಅಥವಾ ಕಾರ್ಯಕರ್ತರನ್ನು ಟೀಕಿಸಬಾರದು.

iii) ಮತಗಳಿಕೆಗಾಗಿ ಜಾತಿ, ಮತ ಮತ್ತು ಕೋಮುಭಾವನೆಗಳ ಆಧಾರದ ಮೇಲೆ ಮನವಿ ಮಾಡತಕ್ಕದ್ದಲ್ಲ. ದೇವಾಲಯ, ಮಸೀದಿ, ಚರ್ಚ್ ಅಥವಾ ಇತರೆ ಪೂಜಾಸ್ಥಳಗಳನ್ನು ಚುನಾವಣಾ ಪ್ರಚಾರ ವೇದಿಕೆಗಳಾಗಿ ಬಳಸಬಾರದು.

iv) ಎಲ್ಲಾ ರೀತಿಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಚುನಾವಣಾ ಕಾನೂನಿನಲ್ಲಿ ಭ್ರಷ್ಟಾಚಾರಣೆ ಮತ್ತು ಅಪರಾಧವಾಗುವ ಚಟುವಟಿಕೆಗಳು ಅಂದರೆ ಮತದಾರರಿಗೆ ಲಂಚ ನೀಡುವುದು, ಮತದಾರರನ್ನು ಬೆದರಿಸುವುದು, ಬೇರೊಬ್ಬರನ್ನು ಕರೆ ತಂದು ಇತರರ ಹೆಸರಿನಲ್ಲಿ ಮತ ಚಲಾಯಿಸುವುದು, ಮತಗಟ್ಟೆಯಿಂದ 100 ಮೀಟರ್‌ಗಳ ಅಂತರದ ಪ್ರದೇಶದ ಒಳಗೆ ಮತಕ್ಕಾಗಿ ಪ್ರಚಾರ ಮಾಡುವುದು, ಗ್ರಾಮ ಪಂಚಾಯತಿಗಳ, ತಾಲ್ಲೂಕು ಪಂಚಾಯತಿಗಳ ಮತ್ತು ಜಿಲ್ಲಾ ಪಂಚಾಯುತಿಗಳ ಚುನಾವಣೆಗೆ ಸಂಬಂಧಿಸಿದಂತೆ ಮತದಾನ ಪ್ರಾರಂಭವಾಗಲು

ನಿಗದಿ ಪಡಿಸಿರುವ ಸಮಯಕ್ಕೆ ಹಿಂದಿನ 48 ಗಂಟೆಗಳ ಅವಧಿಯೊಳಗೆ ಮತ್ತು ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ ಮತ್ತು ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ಮತದಾನ ಪ್ರಾರಂಭಕ್ಕೆ ನಿಗದಿಪಡಿಸಿರುವ ಸಮಯಕ್ಕೆ ಹಿಂದಿನ 48 ಗಂಟೆಗಳ ಅವಧಿಯೊಳಗೆ ಮತ್ತು ಮತದಾನ ನಡೆಯುವ ದಿನಾಂಕ / ದಿನಾಂಕಗಳಂದು ಮತ್ತು ಮತ ಎಣಿಕೆ ನಡೆಯುವ ದಿನಾಂಕ / ದಿನಾಂಕಗಳಂದು ಸಾರ್ವಜನಿಕ ಸಭೆಗಳನ್ನು ನಡೆಸುವುದು ಮತ್ತು ಮತಗಟ್ಟೆಗಳಿಗೆ ಮತದಾರರನ್ನು ವಾಹನದಲ್ಲಿ ಕರೆ ತರುವುದು ಹಾಗೂ ಅಲ್ಲಿಂದ ಕರೆದುಕೊಂಡು ಹೋಗುವುದು ಇಂತಹ ಚಟುವಟಿಕೆಗಳನ್ನೆಸಗಲೇಬಾರದು.

a) ಮತಗಳ ಗಳಿಕೆಗಾಗಿ ರಾಜಕೀಯ ಪಕ್ಷಗಳಾಗಲೀ, ಅಭ್ಯರ್ಥಿ ಅಥವಾ ಅಭ್ಯರ್ಥಿಯ ಪರವಾಗಿ ಯಾವುದೇ ನಿಕಾಯ ಅಥವಾ ವ್ಯಕ್ತಿಗಳು ಧಾರ್ಮಿಕ ಚಿಹ್ನೆಗಳನ್ನು ಬಳಸತಕ್ಕದ್ದಲ್ಲ.

b) ಒಬ್ಬ ಅಭ್ಯರ್ಥಿಯ ಚುನಾವಣೆಯ ಪ್ರತೀಕ್ಷೆಯು ಪ್ರತಿಕೂಲವಾಗಿ ಪರಿಣಮಿಸುವಂತೆ ರಾಜಕೀಯ ಪಕ್ಷಗಳಾಗಲಿ, ಸ್ಪರ್ಧಿಗಳಾಗಲಿ ಅಥವಾ ಸ್ಪರ್ಧಿಗಳ ಪರವಾಗಿ ಇತರೆ ಯಾವುದೇ ನಿಕಾಯವಾಗಲಿ, ವ್ಯಕ್ತಿಗಳಾಗಲಿ ಅಂತಹ ಅಭ್ಯರ್ಥಿಯ ಖಾಸಗಿ ನಡತೆ ಅಥವಾ ಶೀಲಗಳ ಬಗ್ಗೆ ಆಸತ್ಯವಾದ ಅಥವಾ ಸತ್ಯವೆಂದು ನಂಬಿರದ ಹೇಳಿಕೆ ಅಥವಾ ಸುದ್ದಿಯನ್ನು ಪ್ರಚಾರ ಮಾಡತಕ್ಕದ್ದಲ್ಲ.

c) ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿ ಅಥವಾ ಅಭ್ಯರ್ಥಿಯ ಪರವಾಗಿ ಯಾವುದೇ ನಿಕಾಯ ಅಥವಾ ವ್ಯಕ್ತಿಗಳು ಪ್ರಕಟಿಸುವ ಪೋಸ್ಟರ್‌ಗಳು, ಪತ್ರಿಕೆ ಪ್ರಕಟಣಾಪತ್ರ,

ಸುತ್ತೋಲೆ ಮತ್ತು ಜಾಹಿರಾಜುಗಳಲ್ಲಿ ಮುದ್ರಕರು ಮತ್ತು ಪ್ರಕಟಿಸುವವರ ಹೆಸರು ಮತ್ತು ವಿಳಾಸವನ್ನು ತಪ್ಪದೇ ನಮೂದಿಸತಕ್ಕದ್ದು.

d) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಅಥವಾ ಅನುದಾನ ಪಡೆಯುತ್ತಿರುವ ಇತರೆ ಸಂಸ್ಥೆಗಳ ಆಡಳಿತ ವರ್ಗಕ್ಕೆ ಸಂಬಂಧಿಸಿದ ಅಥವಾ ಆಡಳಿತಕ್ಕೆ ಸಂಬಂಧಿಸಿದ ಹೊಣೆಯನ್ನು ಹೊತ್ತಿರುವ ಯಾವುದೇ ಸ್ಪರ್ಧಿಯು ಅಂತಹ ಸಂಸ್ಥೆಗಳಿಗೆ ಸೇರಿದ ಕಟ್ಟಡ, ಮೂಲ ಸೌಕರ್ಯಗಳು, ಸಿಬ್ಬಂದಿ, ನಿಧಿ, ವಾಹನಗಳು ಅಥವಾ ಇನ್ನಿತರೆ ಸಾಮಗ್ರಿಗಳನ್ನು ತಮ್ಮ ಚುನಾವಣಾ ಸಾಧನೆಗಾಗಿ ಬಳಸಿಕೊಳ್ಳುವಂತಿಲ್ಲ.

v) ಪ್ರತಿಯೊಬ್ಬ ವ್ಯಕ್ತಿಯ ಶಾಂತಿಯುತ ಹಾಗೂ ಅಬಾಧಿತ ಕುಟುಂಬ ಜೀವನವನ್ನು ನಡೆಸುವ ಹಕ್ಕನ್ನು ಗೌರವಿಸತಕ್ಕದ್ದು. ರಾಜಕೀಯ ಪಕ್ಷಗಳಾಗಲಿ ಅಥವಾ ಅಭ್ಯರ್ಥಿಗಳಾಗಲಿ ಯಾವುದೇ ಸಂದರ್ಭಗಳಲ್ಲಿ ಯಾವೊಬ್ಬ ವ್ಯಕ್ತಿಯ ಅಭಿಪ್ರಾಯ ಅಥವಾ ಚಟುವಟಿಕೆಗಳನ್ನು ಪ್ರತಿಭಟಿಸುವ ಸಲುವಾಗಿ ಅವರ ನಿವಾಸಗಳ ಮುಂದೆ ಪ್ರದರ್ಶನಗಳನ್ನಾಗಲಿ ಅಥವಾ ಪಿಕೆಟಿಂಗ್ ಆಗಲಿ ನಡೆಸತಕ್ಕದ್ದಲ್ಲ.

vi) ಯಾವುದೇ ವ್ಯಕ್ತಿಗೆ ಸೇರಿದ ಭೂಮಿ, ಕಟ್ಟಡ, ಕಾಂಪೌಂಡ್ ಗೋಡೆ ಮುಂತಾದವುಗಳನ್ನು ಆ ವ್ಯಕ್ತಿಯ ಲಿಖಿತ ಅನುಮತಿ ಪಡೆಯದೆ ಬಾವುಟ ಭಿನಿಲ್ಲಿಸಲು, ಪತಾಕೆಗಳನ್ನು ಕಟ್ಟಲು, ಭಿತ್ತಿಪತ್ರಗಳನ್ನು ಅಂಟಿಸಲು, ಘೋಷಣೆ ಮುಂತಾದವುಗಳನ್ನು ಬರೆಯಲು ಯಾವುದೇ ರಾಜಕೀಯ ಪಕ್ಷ ಅಥವಾ

ಅಭ್ಯರ್ಥಿಯು ತನ್ನ ಅನುಯಾಯಿಗಳಿಗೆ ಅನುಮತಿ ನೀಡತಕ್ಕದ್ದಲ್ಲ.

vii) ಯಾವುದೇ ಸಾರ್ವಜನಿಕ ಆಸ್ತಿಯನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯನ್ನು ಪಡೆಯದೆ ಬಾವುಟ ನಿಲ್ಲಿಸಲು, ಪತಾಕೆಗಳನ್ನು ಕಟ್ಟಲು ಭಿತ್ತಿಪತ್ರಗಳನ್ನು ಅಂಟಿಸಲು ಘೋಷಣೆ ಮುಂತಾದವುಗಳನ್ನ ಬರೆಯಲು ಬ್ಯಾನರ್‌ಗಳನ್ನು ತೂಗು ಹಾಕಲು ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯು ತನ್ನ ಅನುಯಾಯಿಗಳಿಗೆ ಅನುಮತಿ ನೀಡತಕ್ಕದ್ದಲ್ಲ. ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅನುಮತಿ ಪತ್ರದ ಪ್ರತಿಯನ್ನು ತಕ್ಷಣವೆ ಚುನಾವಣಾಧಿಕಾರಿಗಳು ಅಥವಾ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು.

viii) ಇತರೆ ಪಕ್ಷಗಳು ಏರ್ಪಡಿಸುವ ಸಭೆ ಮತ್ತು ಮೆರೆವಣಿಗೆಗಳಲ್ಲಿ ತಮ್ಮ ಬೆಂಬಲಿಗರು ತೊಂದರೆ ಉಂಟು ಮಾಡದಂತೆ ಅಥವಾ ಅವುಗಳಿಗೆ ಭಂಗ ಉಂಟು ಮಾಡದಂತೆ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ನೋಡಿಕೊಳ್ಳತಕ್ಕದ್ದು. ರಾಜಕೀಯ ಪಕ್ಷವೊಂದರ ಕಾರ್ಯಕರ್ತರು ಅಥವಾ ಅವರ ಬಗ್ಗೆ ಸಹಾನುಭೂತಿ ಹೊಂದಿರುವವರು ಮತ್ತೊಂದ ರಾಜಕೀಯ ಪಕ್ಷದ ಸಾರ್ವಜನಿಕ ಸಭೆಗಳಲ್ಲಿ ಮೌಖಿಕವಾಗಿ ಪ್ರಶ್ನೆಗಳು ಅಥವಾ ಬರಹದಲ್ಲಿ ಪ್ರಶ್ನೆ ಕೇಳುವುದರ ಮೂಲಕ ಅಥವಾ ತಮ್ಮ ಪಕ್ಷದ ಕರಪತ್ರಗಳನ್ನು ಹಂಚುವ ಮೂಲಕ ಸಭೆಗೆ ಅಡಚಣೆ, ಗೊಂದಲವನ್ನು ಉಂಟು ಮಾಡತಕ್ಕದ್ದಲ್ಲ. ಒಂದು ಪಕ್ಷವು ಸಭೆ ನಡೆಸುತ್ತಿರುವ ಸ್ಥಳಕ್ಕೆ ಅಥವಾ ಸ್ಥಳದ ಮೂಲಕ ಮತ್ತೊಂದು ಪಕ್ಷವು ಮೆರವಣಿಗೆ ತೆಗೆದುಕೊಂಡು

ಹೋಗತಕ್ಕದ್ದಲ್ಲ. ಯಾವುದೇ ಅಭ್ಯರ್ಥಿ ಅಥವಾ ಅಭ್ಯರ್ಥಿಯ ಪರವಾಗಿ ಕಾರ್ಯನಿರ್ವಹಿಸುವವರು ಮತ್ತೊಬ್ಬ ಅಭ್ಯರ್ಥಿ ಅಥವಾ ಪಕ್ಷವ ಹಾಕಿರುವ ಬಾವುಟ ಅಥವಾ ಬ್ಯಾನರ್‌ಗಳನ್ನು ತೆಗೆದುಹಾಕತಕ್ಕದ್ದಲ್ಲ ಮತ್ತು ಅಂಟಿಸಿರುವ ಭಿತ್ತಿ ಪತ್ರಗಳನ್ನು ವಿರೂಪಗೊಳಿಸತಕ್ಕದ್ದಲ್ಲ.

5. ***ಸಭೆಗಳು***

i) ಸಾಮಾನ್ಯವಾಗಿ ಚುನಾವಣೆಯ ಸಮಯದಲ್ಲಿ ರಾಜಕೀಯ ಪಕ್ಷಗಳು ಅಥವಾ ಸಚಿವರುಗಳು ಅಥವಾ ಚುನಾಯಿತ ಪ್ರತಿನಿಧಿಗಳು ಸಾರ್ವಜನಿಕರೊಂದಿಗೆ ಮತ್ತು ಅವರ ಅನುಯಾಯಿಗಳೊಂದಿಗೆ ಏರ್ಪಡಿಸಿದ ಎಲ್ಲಾ ಸಭೆಗಳನ್ನು ಚುನಾವಣಾ ಸಭೆಗಳೆಂದೇ ಪರಿಗಣಿಸತಕ್ಕದ್ದು ಮತ್ತು ಅಂತಹ ಸಭೆಗಳಿಗೆ ಸರ್ಕಾರದ ಹಣವನ್ನು ಬಳಸಬಾರದು. ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಮತ್ತು ರಕ್ಷಣೆಗಾಗಿ ನಿಯೋಜನೆಯಾದ ಸಿಬ್ಬಂದಿಯ ಹೊರತಾಗಿ ಇತರೆ ಸರ್ಕಾರಿ ನೌಕರರು ಅಂತಹ ಪಕ್ಷಗಳು ಅಥವಾ ಅಭ್ಯರ್ಥಿಗಳು ಏರ್ಪಡಿಸಿದ ಚುನಾವಣೆ ಸಭೆಗಳಲ್ಲಿ ಭಾಗವಹಿಸಕೂಡದು.

ಯಾವುದೇ ರಾಜಕೀಯ ಪಕ್ಷವಾಗಲಿ ಅಥವಾ ಅಭ್ಯರ್ಥಿಯಾಗಲಿ ಸಕ್ಷಮ ಪೊಲೀಸ್ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೆ ಸಾರ್ವಜನಿಕ ಸಭೆಯನ್ನಾಗಲಿ ಅಥವಾ ಮೆರವಣಿಗೆಯನ್ನಾಗಲಿ ನಡೆಸತಕ್ಕದ್ದಲ್ಲ.

ii) ಪೊಲೀಸರು ಸಕಾಲದಲ್ಲಿ ಜನ ಮತ್ತು ವಾಹನಗಳ ಸಂಚಾರವನ್ನು ನಿಯಂತ್ರಿಸಲು ಮತ್ತು ಶಾಂತಿ, ಸುವ್ಯವಸ್ಥೆಯನ್ನು ಕಾಪಾಡುವ ಅಗತ್ಯ ವ್ಯವಸ್ಥೆ ಮಾಡಲು

ಅನುವಾಗುವಂತೆ ಪಕ್ಷ ಅಥವಾ ಅಭ್ಯರ್ಥಿಯು ಅವರು ನಡೆಸಲಿರುವ ಸಭೆ ನಡೆಯುವ ಸ್ಥಳ ಹಾಗೂ ವೇಳೆಯನ್ನು ಮುಂಚಿತವಾಗಿ ಪೊಲೀಸ್ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

iii) ಸಭೆ ನಡೆಸಲು ಉದ್ದೇಶಿಸಿರುವ ಪ್ರದೇಶದಲ್ಲಿ ಯಾವುದೇ ಪ್ರತಿಬಂಧಕಾಜ್ಞೆ ಅಥವಾ ನಿಷೇದಾಜ್ಞೆಯು ಜಾರಿಯಲ್ಲಿದೆಯೇ ಅಥವಾ ಇಲ್ಲವೆ ಎಂಬ ಬಗ್ಗೆ ಪಕ್ಷ ಅಥವಾ ಅಭ್ಯರ್ಥಿಯು ಮುಂಚಿತವಾಗಿಯೇ ವಿಚಾರಿಸಿ ತಿಳಿದುಕೊಳ್ಳತಕ್ಕದ್ದು. ಅಂತಹ ಆದೇಶಗಳು ಜಾರಿಯಲ್ಲಿದ್ದರೆ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಅಂತಹ ಆದೇಶಗಳಿಂದ ಯಾವುದೇ ವಿನಾಯಿತಿಯ ಅಗತ್ಯವಿದ್ದರೆ ಅದಕ್ಕಾಗಿ ಅರ್ಜಿಯನ್ನು ಸಲ್ಲಿಸಿ, ಮುಂಚಿತವಾಗಿ ವಿನಾಯಿತಿಯನ್ನು ಪಡೆದುಕೊಳ್ಳತಕ್ಕದ್ದು.

iv) ನಡೆಸಲಿರುವ ಸಭೆಗೆ ಧ್ವನಿ ವರ್ಧಕಗಳ ಬಳಕೆ ಅಥವಾ ಇತರ ಯಾವುದೇ ಸೌಕರ್ಯಕ್ಕಾಗಿ ಅನುಮತಿಯನ್ನು ಅಥವಾ ಪರವಾನಗಿಯನ್ನು ಪಡೆಯಬೇಕಾಗಿದ್ದಲ್ಲಿ ಪಕ್ಷ ಅಥವಾ ಅಭ್ಯರ್ಥಿಯು ಸಂಬಂಧಪಟ್ಟ ಅಧಿಕಾರಿಗಳಿಗೆ ಸಾಕಷ್ಟು ಮುಂಚಿತವಾಗಿಯೇ ಅರ್ಜಿ ಸಲ್ಲಿಸಿ ಅಂತಹ ಅನುಮತಿ ಅಥವಾ ಪರವಾನಗಿಯನ್ನು ಪಡೆದುಕೊಳ್ಳತಕ್ಕದ್ದು. ಧ್ವನಿ ವರ್ಧಕಗಳನ್ನು ಬೆಳಿಗ್ಗೆ 7.00 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಬಳಸತಕ್ಕದ್ದು, ಯಾವುದೇ ವ್ಯಕ್ತಿ ಇದನ್ನು ಉಲ್ಲಂಘಿಸಿದಲ್ಲಿ ಅಂತಹ ಉಲ್ಲಂಘನೆಗೆ ಕಾರಣವಾದ ಸಾಧನ ಸಾಮಗ್ರಿಯನ್ನು ಜಪ್ತಿ ಮಾಡಲು ಪೊಲೀಸರನ್ನು ಅಧಿಕಾರಯುಕ್ತರನ್ನಾಗಿಸಿದೆ.

v) ಒಂದು ಸಭೆ ನಡೆಯುತ್ತಿರುವಾಗ ಅದಕ್ಕೆ ತೊಂದರೆ ಮಾಡುವ ಅಥವಾ ಬೇರೆ ರೀತಿಯಲ್ಲಿ ಶಿಸ್ತು ಭಂಗ ಮಾಡಲೆತ್ನಿಸುವ

ವ್ಯಕ್ತಿಗಳನ್ನು ತಡೆಯಲು ಸಭೆಯ ಸಮಚಾಲಕರು ಆ ಸಮಯದಲ್ಲಿ ಕರ್ತವ್ಯದ ಮೇಲಿರುವ ಪೊಲೀಸರ ನೆರವನ್ನು ತಪ್ಪದೆ ಪಡೆಯತಕ್ಕದ್ದು, ಅಲ್ಲದೆ ಅಂತಹ ವ್ಯಕ್ತಿಗಳ ವಿರುದ್ಧ ಅವರೇ ಕ್ರಮ ತೆಗೆದುಕೊಳ್ಳತಕ್ಕದ್ದಲ್ಲ.

*6. ಮೆರವಣಿಗೆಗಳು :*

i) ಮೆರವಣಿಗೆಯನ್ನು ಏರ್ಪಡಿಸುವ ಪಕ್ಷ ಅಥವಾ ಅಭ್ಯರ್ಥಿಯು ಮೆರವಣಿಗೆ ಪ್ರಾರಂಭವಾಗುವ ವೇಳೆ ಮತ್ತು ಸ್ಥಳ, ಅದು ಹಾದು ಹೋಗುವ ಮಾರ್ಗಗಳು ಹಾಗೂ ಮೆರವಣಿಗೆಯು ಮುಗಿಯುವ ಸ್ಥಳ ಮತ್ತು ವೇಳೆಯನ್ನು ಮುಂಚಿತವಾಗಿಯೇ ನಿರ್ಧರಿಸತಕ್ಕದ್ದು. ಸಾಮಾನ್ಯವಾಗಿ ಹಾಗೆ ನಿರ್ಧರಿಸಿದ ಕಾರ್ಯಕ್ರಮವನ್ನು ಬದಲಾಯಿಸತಕ್ಕದ್ದಲ್ಲ.

ii) ಮೆರವಣಿಗೆಯನ್ನು ಏರ್ಪಡಿಸುವವರು ಅಗತ್ಯ ಭದ್ರತಾ ವ್ಯವಸ್ಥೆಯನ್ನು ಪೊಲೀಸರು ಮಾಡುವ ಸಲುವಾಗಿ ಅಂತಹ ಮೆರವಣಿಗೆಯ ಕಾರ್ಯಕ್ರಮದ ವಿವರಗಳನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ಮುಂಚಿತವಾಗಿಯೇ ತಿಳಿಸತಕ್ಕದ್ದು.

iii) ಮೆರವಣಿಗೆಯು ಹಾದುಹೋಗುವ ಸ್ಥಳದಲ್ಲಿ ಯಾವುದೇ ನಿರ್ಬಂಧಕಾಜ್ಞೆಯು ಜಾರಿಯಲ್ಲಿದೆಯೇ ಎಂಬುದನ್ನು ಮೆರವಣಿಗೆಯ ಸಂಚಾಲಕರು ಮೊದಲೇ ವಿಚಾರಿಸಿ ತಿಳಿದುಕೊಳ್ಳತಕ್ಕದ್ದು ಮತ್ತು ಪಾಲಿಸತಕ್ಕದ್ದು ಮತ್ತು ಸಕ್ಷಮ ಅಧಿಕಾರಿಯಿಂದ ನಿಬಂಧಕಾಜ್ಞೆಗಳಿಂದ ವಿನಾಯಿತಿಯನ್ನು ಪಡೆದುಕೊಂಡಿದ್ದಗೆ ಮಾತ್ರ ಮೆರವಣಿಗೆಯನ್ನು ಜರುಗಿಸಬಹುದು. ಜಾರಿಯಲ್ಲಿರುವ ಯಾವುದೇ ಸಂಚಾರ ನಿಯಮಗಳು ಅಥವಾ ನಿರ್ವಂಧಕಾಜ್ಞೆಗಳನ್ನು ಸಹ ಎಚ್ಚರಿಕೆಯಿಂದ ಪಾಲಿಸತಕ್ಕದ್ದು.

iv) ವಾಹನ ಸಂಚಾರಕ್ಕೆ ಅಡಚಣೆ ಉಟಾಗದಂತೆ ಅಥವಾ ಅದಕ್ಕೆ ಅಡ್ಡಿ ಉಂಟಾಗದಂತೆ ಮೆರವಣಿಗೆಯು ರಸ್ತೆಯ ಒಂದು ಪಾರ್ಶ್ವದಲ್ಲಿ ಸಾಗುವಂತೆ ಮೆರವಣಿಗೆಯನ್ನು ಏರ್ಪಡಿಸುವವರು ಮೊದಲೇ ತಕ್ಕ ಕ್ರಮಗಳನ್ನು ತೆಗೆದುಕೊಂಡಿರತಕ್ಕದ್ದು. ಮೆರವಣಿಗೆಯು ಅತೀ ಉದ್ದವಾಗಿರುವುದಾದರೆ ಅದನ್ನು ಸೂಕ್ತ ಭಾಗಗಳನ್ನಾಗಿ ವಿಂಗಡಿಸತಕ್ಕದ್ದು. ಇದರಿಂದ ಮುಕ್ತ ಕಾಲಾವಕಾಶ ದೊರಕಿ ವಿಶೇಷವಾಗಿ ರಸ್ತೆಗಳು ಕೂಡುವ ಸ್ಥಳಗಳಲ್ಲಿ ಮೆರವಣಿಗೆಯು ಹಂತ ಹಂತವಾಗಿ ಹಾದುಹೋಗುವುದರಿಂದ ವಾಹನ ಸಂಚಾರಕ್ಕೆ ತಡೆಯುಂಟಾಗುವುದಿಲ್ಲ ಮತ್ತು ವಾಹನ ದಟ್ಟಣೆಯಾಗುವುದಿಲ್ಲ.

v) ಸಾಧ್ಯವಾದಷ್ಟು ಮಟ್ಟಿಗೆ ಮೆರವಣಿಗೆಯು ರಸ್ತೆಯು ಒಂದು ಭಾಗದಲ್ಲಿಯೇ ಸಾಗುವಂತೆ ನಿಯಂತ್ರಿಸತಕ್ಕದ್ದು ಮತ್ತು ಕರ್ತವ್ಯನಿರತ ಪೊಲೀಸರ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು

vi) ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಒಂದೇ ರಸ್ತೆಯಲ್ಲಿ ಅಥವಾ ಅದರ ಭಾಗಗಳಲ್ಲಿ ಒಂದೇ ವೇಳೆಯಲ್ಲಿ ಮೆರವಣಿಗೆಯನ್ನು ನಡೆಸಲು ಉದ್ದೇಶಿಸಿದರೆ ಎರಡೂ ಕಡೆಯ ಮೆರವಣಿಗೆಯ ಜನರಲ್ಲಿ ಘರ್ಷಣೆಯಾಗದಂತೆ ಅಥವಾ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ತಕ್ಕ ಕ್ರಮಗಳನ್ನು ಮುಂಚಿತವಾಗಿಯೇ ಪರಸ್ಪರ ಚರ್ಚೆ ಮಾಡಿ ನಿರ್ಧಾರ ಮಾಡಿಕೊಂಡಿರತಕ್ಕದ್ದು. ಎರಡೂ ಪಕ್ಷಗಳವರಿಗೆ ತೃಪ್ತಿಕರವಾಗುವ ವ್ಯವಸ್ಥೆಯನ್ನು ಮಾಡಲು ಸ್ಥಳೀಯ ಪೊಲೀಸರ ನೆರವನ್ನು ಪಡೆಯತಕ್ಕದ್ದು. ಈ ಉದ್ದೇಶಕ್ಕಾಗಿ ಸಾಧ್ಯವಾದಷ್ಟು ಶೀಘ್ರವಾಗಿ ಪಕ್ಷಗಳ ಸಂಚಾಲಕರು ಅಥವಾ ಅಭ್ಯರ್ಥಿಗಳು ಪೊಲೀಸರೊಡನೆ ಸಮಾಲೋಚಿಸತಕ್ಕದ್ದು.

vii) ಮೆರವಣಿಗೆಯಲ್ಲಿರುವವರು ಕೊಂಡೊಯ್ಯುವ ವಸ್ತುಗಳನ್ನು ವಿಶೇಷವಾಗಿ ಉದ್ವೇಗದ ಪ್ರಸಂಗಗಳಲ್ಲಿ ಅನಿಷ್ಠಶಕ್ತಿಗಳ ದುರಪಯೋಗ ಪಡಿಸಿಕೊಳ್ಳಬಹುದಾದ್ದರಿಂದ ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಈ ವಿಚಾರದಲ್ಲಿ ಪರಮಾವಧಿ ನಿಯಂತ್ರಣವನ್ನು ಹೊಂದಿರತಕ್ಕದ್ದು.

viii) ಇತರೆ ರಾಜಕೀಯ ಪಕ್ಷಗಳ ಸದಸ್ಯರ ಅಥವಾ ಅವರ ಮುಖಂಡರಂತೆ ಕಾಣುವ ಪ್ರತಿಕೃತಿಗಳನ್ನು ಕೊಂಡೊಯ್ಯುವುದು, ಅಂತಹ ಪ್ರತಿಕೃತಿಗಳನ್ನು ಸಾರ್ವಜನಿಕವಾಗಿ ಸುಡುವುದು ಮತ್ತು ಅಂತಹ ಇತರೆ ಯಾವುದೇ ಪ್ರದರ್ಶನಕ್ಕೆ ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯು ಎಡೆಮಾಡಿಕೊಡತಕ್ಕದ್ದಲ್ಲ.

*7. ಮತದಾನದ ದಿನ :*

ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಈ ಕೆಳಕಂಡ ನಿಯಮಗಳನ್ನು ತಪ್ಪದೇ ಪಾಲಿಸಬೇಕು.

i) ಶಾಂತಿಯುತ ಮತ್ತು ಕ್ರಮಬದ್ಧ ಮತದಾನ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಕರ್ತವ್ಯದಲ್ಲಿ ನಿರತರಾಗಿರುವ ಅಧಿಕಾರಿಗಳೊಂದಿಗೆ ಸಹಕರಿಸತಕ್ಕದ್ದು ಮತ್ತು ಯಾವುದೇ ಕಿರುಕುಳ ಅಥವಾ ಅಡಚಣೆ ಇಲ್ಲದೆ ಮತದಾರರು ಪೂರ್ಣ ಮುಕ್ತ ವಾತಾವರಣದಲ್ಲಿ ಅವರ ಮತದಾನದ ಹಕ್ಕನ್ನು ಚಲಾಯಿಸುವಲ್ಲಿ ಸಂಪೂರ್ಣವಾಗಿ ಸಹಕರಿಸತಕ್ಕದ್ದು.

ii) ಮತಗಟ್ಟೆ ಮತ್ತು ಮತಗಟ್ಟೆಯ ಸಮೀಪದ ಸ್ಥಳಗಳಲ್ಲಿ ಶಿಸ್ತಿನಿಂದ ನಡೆದುಕೊಳ್ಳತಕ್ಕದ್ದು ಮತ್ತು ಚುನಾವಣೆ ಕಾರ್ಯ ನಿರ್ವಹಣೆಯಲ್ಲಿರುವ ಯಾವುದೇ ಅಧಿಕಾರಿಗಳು ಅಥವಾ ಮತಗಟ್ಟೆ ಅಧಿಕಾರಿಗಳು ಅವರ ಕರ್ತವ್ಯವನ್ನು ನಿರ್ವಹಿಸುವಲ್ಲಿ ಯಾವುದೇ ಅಡೆತಡೆ ಉಂಟು ಮಾಡತಕ್ಕದ್ದಲ್ಲ.

iii) ಪಕ್ಷ ಅಥವಾ ಅಭ್ಯರ್ಥಿಯ ಪರ ಅಧಿಕೃತ ಕಾರ್ಯಕರ್ತರಿಗೆ ಸೂಕ್ತವಾದ ಬ್ಯಾಡ್ಜ್‌ಗಳನ್ನು ಅಥವಾ ಗುರುತಿನ ಚೀಟಿಗಳನ್ನು ಒದಗಿಸತಕ್ಕದ್ದು.

iv) ಮತದಾರರಿಗೆ ನೀಡುವ ಗುರುತಿನ ಚೀಟಿಗಳು ಖಾಲಿ ಹಾಳೆಯಲ್ಲಿರುವಂತೆ ಮತ್ತು ಅದರಲ್ಲಿ ಯಾವುದೇ ರೀತಿಯ ಚಿಹ್ನೆ ಅಥವಾ ಪಕ್ಷದ ಹೆಸರು ಇರದ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

v) ಮತದಾನದ ದಿನ ಮತ್ತು ಅದಕ್ಕೆ ಮುಂಚಿತ 24 ಗಂಟೆಗಳ ಅವಧಿಯಲ್ಲಿ ಮದ್ಯವನ್ನು ಕೊಡಬಾರದು ಅಥವಾ ಹಂಚಬಾರದು.

vi) ಪಕ್ಷಗಳು ಅಥವಾ ಅಭ್ಯರ್ಥಿಗಳ ಪರ ಕಾರ್ಯಕರ್ತರಲ್ಲಿ ಮತ್ತು ಸಹಾನುಭೂತಿಯುಳ್ಳವರ ಮಧ್ಯೆ ಘರ್ಷಣೆ ಮತ್ತು ಉದ್ವೇಗಗಳಿಗೆ ಅವಕಾಶ ಉಂಟಾಗದಂತೆ ನೋಡಿಕೊಳ್ಳಲು ರಾಜಕೀಯ ಪಕ್ಷಗಳು ಅಥವಾ ಅಭ್ಯರ್ಥಿಗಳು ಏರ್ಪಡಿಸಬಹುದಾದ ಶಿಬಿರಗಳ ಹತ್ತಿರ ಅನಗತ್ಯವಾದ ಗುಂಪುಗಳು ಸೇರುವುದಕ್ಕೆ ಅವಕಾಶ ನೀಡಬಾರದು.

vii) ಅಭ್ಯರ್ಥಿಗಳ ಶಿಬಿರಗಳು ಸರಳವಾಗಿರುವಂತೆ ನೋಡಿಕೊಳ್ಳತಕ್ಕದ್ದು. ಶಿಬಿರಗಳಲ್ಲಿ ಯಾವುದೇ ರೀತಿಯ ಭಿತ್ತಿ ಪತ್ರ, ಬಾವುಟ, ಚಿಹ್ನೆಗಳನ್ನು ಹಾಕಬಾರದು, ಅಥವಾ ಯಾವುದೇ ಇತರೆ ಪ್ರಚಾರ ಸಾಧನಗಳಿರಕೂಡದು, ತಿಂಡಿ ತಿನಿಸುಗಳನ್ನು ಹಂಚಬಾರದು ಮತ್ತು ಶಿಬಿರದೊಳಗೆ ಗುಂಪುಗಳನ್ನ ಬಿಡಬಾರದು ಮತ್ತು

viii) ಮತದಾನ ನಡೆಯುವ ದಿನ ವಾಹನಗಳನ್ನು ಬಳಸುವುದರ ಮೇಲೆ ವಿಧಿಸಲಾಗಿರುವ ನಿರ್ಬಂಧಗಳನ್ನು ಪಾಲಿಸುವಲ್ಲಿ ಅಧಿಕಾರಿಗಳೊಂದಿಗೆ ಸಹಕರಿಸತಕ್ಕದ್ದು. ಮತ್ತು ಅಭ್ಯರ್ಥಿಗಳು ಅಥವಾ ಅವರ ಏಜೆಂಟರುಗಳು ಬಳಸುವ ವಾಹನಗಳಿಗೆ ಪರ್ಮಿಟ್ಟನ್ನು ಪಡೆದು ವಾಹನಗಳ ಮೇಲೆ ಅವುಗಳು ಎದ್ದು

ಕಾಣುವಂತೆ ಅಂಟಿಸಬೇಕು. ಒಬ್ಬ ಅಭ್ಯರ್ಥಿಗೆ ಅಂತಹ 5 ಪರ್ಮಿಟ್ಟುಗಳು ಗರಿಷ್ಠವಾಗಿದೆ.

*8. ಮತಗಟ್ಟೆ :*

ಮತದಾರರ ಹೊರತು ಜಿಲ್ಲಾಧಿಕಾರಿ ಅಥವಾ ರಾಜ್ಯ ಚುನಾವಣಾ ಆಯೋಗದಿಂದ ಸಿಂಧುವಾದ ಪಾಸನ್ನು ಹೊಂದಿರದ ಯಾವುದೇ ವ್ಯಕ್ತಿಯು ಮತಗಟ್ಟೆಯನ್ನು ಪ್ರವೇಶಿಸತಕ್ಕದ್ದಲ್ಲ.

*9. ಅಧಿಕಾರದಲ್ಲಿರುವ ಪಕ್ಷ*

ಅಧಿಕಾರದಲ್ಲಿರುವ ಪಕ್ಷವು ತನ್ನ ಚುನಾವಣಾ ಪ್ರಚಾರಕ್ಕಾಗಿ ತನ್ನ ಅಧಿಕಾರವನ್ನು ಉಪಯೋಗಿಸಿದೆ ಎಂಬ ಯಾವುದೇ ದೂರಿಗೆ ಅವಕಾಶವಾಗದಂತೆ ಖಚಿತ ಪಡಿಸಿಕೊಳ್ಳತಕ್ಕದ್ದು ಮತ್ತು ಅದರಲ್ಲಿ ವಿಶೇಷವಾಗಿ :

(i) (a) ಸಚಿವರುಗಳೂ ಅವರ ಅಧಿಕೃತ ಭೇಟಿಯನ್ನು ಚುನಾವಣಾ ಕಾರ್ಯಗಳೊಂದಿಗೆ ಸೇರಿಸಬಾರದು ಮತ್ತು ಸರ್ಕಾರಿ ಯಂತ್ರ ಅಥವಾ ಸಿಬ್ಬಂದಿಯನ್ನು ಚುನಾವಣಾ ಕೆಲಸಗಳ ಅವಧಿಯಲ್ಲಿ ಉಪಯೋಗಿಸಕೂಡದು.

(b) ಅಧಿಕಾರದಲ್ಲಿರುವ ಪಕ್ಷದ ಹಿತಾಸಕ್ತಿಗಾಗಿ ಸರ್ಕಾರಿ ಸಾರಿಗೆ ಮತ್ತು ಸಿಬ್ಬಂದಿಯನ್ನು ಉಪಯೋಗಿಸತಕ್ಕದ್ದಲ್ಲ.

(c) ಸರ್ಕಾರದ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಅಥವಾ ಸಾರ್ವಜನಿಕ ಉದ್ದಿಮೆಗಳ ಅಥವಾ ಸಹಕಾರಿ ಸಂಸ್ಥೆಗಳ ಅಥವಾ ಸರ್ಕಾರದಿಂದ ಮಂಜೂರಾತಿ ಅಥವಾ ಅನುದಾನ ಪಡೆಯುತ್ತಿರುವ ಇತರೆ ಯಾವುದೇ ಸಂಸ್ಥೆಗಳ ವಾಹನಗಳನ್ನು ಯಾವುದೇ ರೀತಿಯ ಚುನಾವಣಾ ಪ್ರಚಾರ ಕಾರ್ಯಕ್ಕೆ

ಯಾವುದೇ ಸಚಿವರು ಅಥವಾ ಲೋಕಸಭಾ ಸದಸ್ಯರು ಅಥವಾ ವಿಧಾನಮಂಡಲ ಸದಸ್ಯರುಗಳು ಅಥವಾ ಅಭ್ಯರ್ಥಿಗಳಿಗೆ ಒದಗಿಸತಕ್ಕದ್ದಲ್ಲ.

(ii) ಆಡಳಿತ ಪಕ್ಷವು ಮೈದಾನ ಮುಂತಾದ ಸಾರ್ವಜನಿಕ ಸ್ಥಳಗಳನ್ನು ಚುನಾವಣಾ ಸಭೆಗಳನ್ನು ನಡೆಸಲು ಏಕಸ್ವಾಮ್ಯಕ್ಕೆ ಒಳಪಡಿಸಿಕೊಳ್ಳಬಾರದು. ಆಡಳಿತ ಪಕ್ಷವು ಯಾವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅಂತಹ ಸ್ಥಳವನ್ನು ಮತ್ತು ಸೌಲಭ್ಯಗಳನ್ನು ಉಪಯೋಗಿಸುತ್ತದೆಯೋ ಅದೇ ಷರತ್ತು ಮತ್ತು ನಿಬಂಧನೆಗಳ ಮೇಲೆ ಇತರೆ ಪಕ್ಷಗಳಿಗೆ ಮತ್ತು ಅಭ್ಯರ್ಥಿಗಳಿಗೂ ಉಪಯೋಗಿಸಲು ಅವಕಾಶ ನೀಡಬೇಕು.

(iii) ಅಧಿಕಾರದಲ್ಲಿರುವ ಪಕ್ಷ ಅಥವಾ ಅದರ ಅಭ್ಯರ್ಥಿಗಳು ವಿಶ್ರಾಂತಿ ಗೃಹ, ಡಾಕ್ ಬಂಗ್ಲೆ ಅಥವಾ ಇತರೆ ಸರ್ಕಾರಿ ವಸತಿ ಗೃಹಗಳ ಉಪಯೋಗದ ಏಕಸ್ವಾಮದ್ಯತೆಯನ್ನು ಹೊಂದಿರತಕ್ಕದ್ದಲ್ಲ ಮತ್ತು ಅಂತಹ ವಸತಿ ಗೃಹಗಳನ್ನು ಇತರೆ ಪಕ್ಷಗಳಿಗೆ ಸೇರಿದವರು ಹಾಗೂ ಅವರ ಅಭ್ಯರ್ಥಿಗಳು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಳ್ಳಲು ಅವಕಾಶ ನೀಡತಕ್ಕದ್ದು. ಆದರೆ ಅದಕ್ಕೆ ಸೇರಿದ ಆವರಣವನ್ನು ಒಳಗೊಂಡಂತೆ ಅಂತಹ ವಿಶ್ರಾಂತಿಗೃಹ, ಡಾಕ್ ಬಂಗ್ಲೆ ಅಥವಾ ವಸತಿಗೃಹವನ್ನು ಚುನಾವಣಾ ಪ್ರಚಾರದ ಉದ್ದೇಶಗಳಿಗಾಗಿ ಪ್ರಚಾರ ಕಛೇರಿಯಾಗಿ ಅಥವಾ ಯಾವುದೇ ಸಾರ್ವಜನಿಕ ಸಭೆಯನ್ನು ನಡೆಸಲು ಉಪಯೋಗಿಸತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿ ನೀಡತಕ್ಕದ್ದಲ್ಲ.

(iv) ಸಾರ್ವಜನಿಕ ನಿಧಿಯಿಂದ ಸಮಾಚಾರ ಪತ್ರಿಕೆಗಳಲ್ಲಿ ಮತ್ತು ಇತರೆ ಮಾಧ್ಯಮಗಳ ಮೂಲಕ ಜಾಹಿರಾತು ನೀಡುವುದನ್ನು

ಅಥವಾ ಸರ್ಕಾರಿ ಮಾಧ್ಯಮಗಳನ್ನು ದುರುಪಯೋಗ ಪಡಿಸಿಕೊಳ್ಳುವುದು, ಚುನಾವಣಾ ಅವಧಿಯಲ್ಲಿ ರಾಜಕೀಯ ಸಮಾಚಾರದಲ್ಲಿ ಅವರ ಪಕ್ಷದ ಸುದ್ದಿಯನ್ನು ನೀಡುವುದು, ಆಡಳಿತ ಪಕ್ಷದ ಪ್ರಗತಿಯನ್ನು ವೃದ್ಧಿಗೊಳಿಸಿಕೊಳ್ಳುವ ದೃಷ್ಟಿಯಿಂದ ತನ್ನ ಸಾಧನೆಗಳನ್ನು ಪ್ರಕಟಿಸುವುದು ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ತಡೆಯತಕ್ಕದ್ದು.

(v) ರಾಜ್ಯ ಚುನಾವಣಾ ಆಯೋಗವು ಚುನಾವಣೆಯನ್ನು ಘೋಷಿಸಿದ ಸಮಯದಿಂದ ಸಚಿವರುಗಳು ಅಥವಾ ಸಂಸತ್ ಸದಸ್ಯರುಗಳು ಅಥವಾ ರಾಜ್ಯ ವಿಧಾನಮಂಡಲದ ಸದಸ್ಯರುಗಳು ಮತ್ತು ಇತರೆ ಪ್ರಾಧಿಕಾರಗಳು ಚುನಾವಣೆ ನಡೆಯಲಿರುವ ಕ್ಷೇತ್ರಗಳಿಗೆ ಅವರ ವಿವೇಚನೆಯಲ್ಲಿರುವ ನಿಧಿಯನ್ನು ಮಂಜೂರು ಮಾಡತಕ್ಕದ್ದಲ್ಲ ಮತ್ತು ಸಂದಾಯ ಮಾಡತಕ್ಕದ್ದಲ್ಲ.

(vi) ಚುನಾವಣೆಯನ್ನು ಘೋಷಿಸುವ ಸಮಯದಿಂದ ಸಚಿವರು ಮತ್ತು ಇತರೆ ಬೇರೆ ಪ್ರಾಧಿಕಾರಗಳು :-

a) ಯಾವುದೇ ರೂಪದಲ್ಲಿ ಹಣಕಾಸನ್ನು ಮಂಜೂರು ಮಾಡಿದೆಯೆಂದು ಘೋಷಿಸತಕ್ಕದ್ದಲ್ಲ. ಅಥವಾ ಆ ಬಗ್ಗೆ ಆಶ್ವಾಸನೆಯನ್ನು ನೀಡತಕ್ಕದ್ದಲ್ಲ ಅಥವಾ

b) ಯಾವುದೇ ರೀತಿಯ ಯೋಜನೆಗಳ ಅಥವಾ ಕಾರ್ಯಕ್ರಮಗಳ ಅಥವಾ ಮುಂತಾದವುಗಳ ಬಗ್ಗೆ ಆಸ್ತಿಭಾರ ಹಾಕತಕ್ಕದ್ದಲ್ಲ ಅಥವಾ

c) ರಸ್ತೆಗಳ ನಿರ್ಮಾಣದ ಬಗ್ಗೆಯಾಗಲಿ, ಕುಡಿಯುವ ನೀರಿನ ಸೌಕರ್ಯದ ಏರ್ಪಾಡಿನ ಬಗ್ಗೆಯಾಗಲಿ ಯಾವುದೇ ಆಶ್ವಾಸನೆಯನ್ನು ನೀಡತಕ್ಕದ್ದಲ್ಲ.

d) ಸರ್ಕಾರ ಅಥವಾ ಸಾರ್ವಜನಿಕ ಸಂಸ್ಥೆಗಳು ಮುಂತಾದವುಗಳಲ್ಲಿ ಯಾವುದೇ ಅಡಹಾಕ್ (Adhoc) (ತಾತ್ಪೂರ್ತಿಕ) ನೇಮಕಾತಿಗಳನ್ನು ಮಾಡತಕ್ಕದ್ದಲ್ಲ.

e) ಸರ್ಕಾರದ ವೆಚ್ಚದಲ್ಲಿ ಮತದಾರರ ಮನಸ್ಸಿನ ಮೇಲೆ ಪರಿಣಾಮ ಬೀರುವಂತಹ ಯಾವುದೆ ಕಾರ್ಯವನ್ನು ಮಾಡತಕ್ಕದ್ದಲ್ಲ.

(vii) ಸಚಿವರುಗಳು ಅವರ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯಾಗಿ ಅಥವಾ ಮತದಾರನಾಗಿ ಅಥವಾ ಅಧಿಕೃತ ಏಜೆಂಟನಾಗಿ ಪ್ರವೇಶಿಸುವುದನ್ನು ಹೊರತುಪಡಿಸಿ ಯಾವುದೇ ಮತಗಟ್ಟೆ ಅಥವಾ ಮತ ಎಣಿಕೆಯ ಸ್ಥಳಕ್ಕೆ ಹೋಗತಕ್ಕದ್ದಲ್ಲ.

(viii) ಒಂದು ಜಿಲ್ಲೆಯಲ್ಲಿ ಚುನಾವಣೆ ನಡೆಯಲಿರುವ ಪ್ರದೇಶಕ್ಕೆ ಸಚಿವರು ಪ್ರವಾಸ ಕೈಗೊಂಡಾಗ ಅಂತಹ ಪ್ರವಾಸಗಳನ್ನು ಚುನಾವಣಾ ಪ್ರವಾಸವೆಂದೇ ಪರಿಗಣಿಸತಕ್ಕದ್ದು ಮತ್ತು ಸಚಿವರ ಸುರಕ್ಷತೆಗಾಗಿ ನಿಯೋಜಿಸಲಾದ ಸಿಬ್ಬಂದಿಯನ್ನು ಹೊರತುಪಡಿಸಿ, ಇತರೆ ಸರ್ಕಾರಿ ನೌಕರರು ಅಂತಹ ಸಚಿವರ ಜೊತೆಯಲ್ಲಿ ಹೋಗುವಂತಿಲ್ಲ. ಸರ್ಕಾರ ವಾಹನಗಳನ್ನಾಗಲಿ ಅಥವಾ ಸರ್ಕಾರದ ಇತರೆ ಸೌಲಭ್ಯಗಳನ್ನಾಗಲಿ ಅಂತಹ ಪ್ರವಾಸದ ಸಮಯದಲ್ಲಿ ಒದಗಿಸತಕ್ಕದ್ದಲ್ಲ.

(ix) ಈ ಮೇಲ್ಕಂಡ ಸಂಹಿತೆಯನ್ನು ಉಲ್ಲಂಘಿಸಿದವರ ವಿರುದ್ಧ ಆಯೋಗಕ್ಕೆ ಮಾಹಿತಿಯನ್ನು ನೀಡಿ ಸಕ್ಷಮ ನ್ಯಾಯಾಲಯಗಳಲ್ಲಿ ಅಥವಾ ಪ್ರಾಧಿಕಾರದ ಮುಂದೆ ಕಾನೂನು ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು / ಆಯುಕ್ತರು, ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು ಮತ್ತು ಪೊಲೀಸರಿಗೆ ಅಧಿಕಾರ ನೀಡಲಾಗಿದೆ.

*ಸರ್ಕಾರಿ ನೌಕರರು :*

1. **ಚುನಾವಣೆಯ ಕಾರ್ಯಕ್ಕಾಗಿ ನಿಯೋಜಿಸಿದ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ :**

   ಚುನಾವಣೆಯ ಕಾರ್ಯಕ್ಕಾಗಿ ಜಿಲ್ಲಾಧಿಕಾರಿಗಳು ಯಾವುದೇ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಯ ಸೇವೆಯನ್ನು ಅಪೇಕ್ಷಿಸಿದಾಗ ಅಂತಹವರ ಸೇವೆಯನ್ನು ತುರ್ತಾಗಿ ಒದಗಿಸತಕ್ಕದ್ದು.

2. **ರಜೆ ಮಂಜೂರಾತಿ :**

   ಚುನಾವಣೆಯ ಕಾರ್ಯ ನಿರ್ವಹಣೆಗಾಗಿ ತೆಗೆದುಕೊಂಡ ಸರ್ಕಾರಿ ನೌಕರರು ಅಥವಾ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಅಥವಾ ಇತರೆ ಸಿಬ್ಬಂದಿಗೆ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗುವವರೆಗೆ ಪರಿಸ್ಥಿತಿಯನ್ನು ಪರಿಗಣಿಸಿ ಒಂದು ಅಥವಾ ಎರಡು ದಿನಗಳ ಸಾಂದರ್ಭಿಕ ರಜೆಯನ್ನು ಹೊರತು ಪಡಿಸಿ ರಜೆಯನ್ನು ಮಂಜೂರು ಮಾಡಬಾರದು.

3. **ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿಯ ವರ್ಗಾವಣೆಗಳು :**

   ರಾಜ್ಯ ಚುನಾವಣಾ ಆಯೋಗದ ಲಿಖಿತ ಪೂರ್ವಾನುಮತಿ ಇಲ್ಲದೆ ಸರ್ಕಾರವು ಚುನಾವಣಾ ಪ್ರಕ್ರಿಯೆ ಬಗ್ಗೆ ಆಯೋಗವು ಘೋಷಿಸಿದ ದಿನಾಂಕದಿಂದ ಚುನಾವಣಾ ಪ್ರಕ್ರಿಯೆ ಮುಕ್ತಾಯವಾಗುವವರೆಗೆ ಅಧಿಕಾರಿಗಳನ್ನು ಅಥವಾ ಸಿಬ್ಬಂದಿಯನ್ನು ವರ್ಗಾವಣೆ ಮಾಡತಕ್ಕದ್ದಲ್ಲ. ಚುನಾವಣಾ ಕಾರ್ಯಕ್ಕೆ ನಿಯೋಜಿಸಿಕೊಂಡಂತಹ ಸರ್ಕಾರಿ ನೌಕರರನ್ನು ಅವರು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಿಂದ ವರ್ಗಾಣೆ ಮಾಡತಕ್ಕದ್ದಲ್ಲ. ಈ ನಿಬಂಧನೆಗಳು ಪೊಲೀಸ್ ಇಲಾಖೆಗೂ ಅನ್ವಯಿಸುತ್ತದೆ.

4. **ಚುನಾವಣೆಗಳಲ್ಲಿ ಸರ್ಕಾರಿ ನೌಕರರು ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವ ಬಗ್ಗೆ :**

   a) ಚುನಾವಣೆಗಳಲ್ಲಿ ಸರ್ಕಾರಿ ನೌಕರರು ಸಂಪೂರ್ಣವಾಗಿ ನಿಷ್ಪಕ್ಷಪಾತವಾಗಿ ಇರತಕ್ಕದ್ದು ಮತ್ತು ಸ್ಪರ್ಧೆಯಲ್ಲಿರುವ

ಯಾವುದೇ ಅಭ್ಯರ್ಥಿ ಅಥವಾ ಪಕ್ಷದ ಪರವಾಗಿ ಅಥವಾ ವಿರೋಧವಾಗಿ ಪ್ರಚಾರ ಕಾರ್ಯದಲ್ಲಿ ತೊಡಗತಕ್ಕದ್ದಲ್ಲ.

b) ಸಚಿವರು ಅವರ ಚುನಾವಣಾ ಪ್ರವಾಸಗಳ ಸಮಯದಲ್ಲಿ ಇತರೆ ವ್ಯಕ್ತಿಗಳ ಗೃಹಗಳಲ್ಲಿ ಏರ್ಪಡಿಸುವ ಕಾರ್ಯಕ್ರಮಗಳ ಆಹ್ವಾನವನ್ನು ಒಪ್ಪಿಕೊಂಡಿದ್ದಲ್ಲಿ, ಸರ್ಕಾರಿ ನೌಕರರು ಅಂತಹ ಕಾರ್ಯಕ್ರಮಗಳಿಗೆ ಸಚಿವರ ಜೊತೆಯಲ್ಲಿ ಹೋಗತಕ್ಕದ್ದಲ್ಲ ಮತ್ತು ಅಂತಹ ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕದ್ದಲ್ಲ.

c) ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿಯನ್ನು ಹೊಂದಿರುವ ಸರ್ಕಾರಿ ನೌಕರರು ಮತ್ತು ಸುರಕ್ಷತೆಗಾಗಿ ನಿಯೋಜಿಸಲಾದ ರಕ್ಷಣಾ ಸಿಬ್ಬಂದಿಯನ್ನು ಹೊರತುಪಡಿಸಿ, ಇತರೆ ಸರ್ಕಾರಿ ನೌಕರರು ಸಚಿವರು ಏರ್ಪಡಿಸುವ ಚುನಾವಣಾ ಸಭೆಗಳಲ್ಲಿ ಭಾಗವಹಿಸತಕ್ಕದ್ದಲ್ಲ.

d) ಸರ್ಕಾರಿ ಸಿಬ್ಬಂದಿ ಅಥವಾ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಯು ಯಾವುದೇ ಅಭ್ಯರ್ಥಿ ಅಥವಾ ಪಕ್ಷದ ಪರವಾಗಿ ಪ್ರಚಾರ ಮಾಡತಕ್ಕದ್ದಲ್ಲ ಮತ್ತು ಪ್ರಭಾವವನ್ನು ಬೀರತಕ್ಕದ್ದಲ್ಲ ಅಥವಾ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ. ಅವನು ಪ್ರಮಾಣಿಕವಾಗಿ ಹಾಗೂ ನಿಷ್ಪಕ್ಷಪಾತವಾಗಿರಬೇಕಲ್ಲದೆ ಹಾಗೆ ಇರುವುದಾಗಿ ಸಾರ್ವಜನಿಕರಿಗೆ ತೋರಬೇಕು.

ಮೇಲಿನ ಕಂಡಿಕೆಗಳು ಸ್ಥೂಲವಾದ ಮಾರ್ಗದರ್ಶನಗಳನ್ನು ಮಾತ್ರ ಒಳಗೊಂಡಿರುತ್ತದೆ. ಸದಾಚಾರ ಸಂಹಿತೆಯ ಕಟ್ಟುನಿಟ್ಟಾದ ಪಾಲನೆಗಾಗಿ ಅವಶ್ಯವೆನಿಸಿದಲ್ಲಿ ರಾಜ್ಯ ಚುನಾವಣಾ ಆಯೋಗವು ಆದೇಶಗಳನ್ನು, ನಿರ್ದೇಶನಗಳನ್ನು ಮತ್ತು ಸೂಚನೆಗಳನ್ನು ಹೊರಡಿಸುತ್ತದೆ.

ಪಿ.ಎನ್. ಶ್ರೀನಿವಾಸಾಚಾರಿ
ಆಯುಕ್ತರು
ರಾಜ್ಯ ಚುನಾವಣಾ ಆಯೋಗ, ಬೆಂಗಳೂರು

Govt. Central Press, Bengaluru-59 / WD P-101 / 2,50,000 Copies